# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

| | | |
|---|---|---|
| ಭಾಗ – ೬–ಬಿ<br>Part – VI-B | ಬೆಳಗಾವಿ, ಮಂಗಳವಾರ, ೧೦ ಫೆಬ್ರವರಿ, ೨೦೨೬ (ಮಾಘ ೨೧, ಶಕ ವರ್ಷ ೧೯೪೭)<br>Belagavi, Tuesday, 10 February, 2026 (Magha 21, Shaka Varsha 1947) | ನಂ. ೦೨<br>No. 02 |



**ಜಿಲ್ಲಾಧಿಕಾರಿಗಳ ಕಾರ್ಯಾಲಯ,**
**(ಚುನಾವಣೆ ವಿಭಾಗ),**
ಕೊಠಡಿ ಸಂ: 117, ಜಿಲ್ಲಾಡಳಿತ ಭವನ,
ಗದಗ – 582101
ದೂ ಸಂ: 08372–234880, 237300, 236155 (ಫ್ಯಾ)
ಇ–ಮೇಲ್ : deo.elngdg@gmail.com

ಕಂದಾಯ ಇಲಾಖೆ

**Office of the Deputy Commissioner,**
**(Election Branch),**
Room No: 117
Dist Administrative Buld.
Gadag- 582101
Tel No: 08372-234880, 237300, 236155 (F)
E-mail: deo.elngdg@gmail.com


ನಂ/ಗ್ರಾ.ಪಂ/ಚು/ವಹಿ/05/2025–26 ದಿನಾಂಕ: 05–02–2026

**:: ಕರಡು ಅಧಿಸೂಚನೆ ::**

ಗದಗ ಜಿಲ್ಲೆಯ ಲಕ್ಷ್ಮೇಶ್ವರ ತಾಲೂಕು ಅಡರಕಟ್ಟಿ ಗ್ರಾಮ ಪಂಚಾಯತ ವ್ಯಾಪ್ತಿಯಲ್ಲಿ ಬರುವ ಕಂದಾಯ ಗ್ರಾಮಗಳಾದ ಹುಲಗೇರಿಬಣ, ಬಸ್ತಿಬಣ ಹಾಗೂ ದೇಸಾಯಿ ಬಣ, ಗ್ರಾಮಗಳ ವಸತಿ ರಹಿತವಾದ ಜಮೀನುಗಳನ್ನು ಅಂದರೆ 1) ದೇಸಾಯಿಬಣ (ಸರ್ವೆ ನಂ: 07 ರಿಂದ 78, 91, 103, 108 ರಿಂದ 171, 178 ರಿಂದ 368), 2) ಪೇಠಬಣ (ಸರ್ವೆ ನಂ: 09, 15 ರಿಂದ 79, 81), 3) ಬಸ್ತಿಬಣ (ಸರ್ವೆ ನಂ: ಸರ್ವೆ ನಂ : 02 ರಿಂದ 56), 4) ಹಿರೇಬಣ (ಸರ್ವೆ ನಂ. 18 ರಿಂದ 35, 37 ರಿಂದ 326, 330 ರಿಂದ 347, 350 ರಿಂದ 404, 411) ಹಾಗೂ 5) ಹುಲಗೇರಿ ಬಣ (ಸರ್ವೆ ನಂ: 3 ರಿಂದ 7, 28 ರಿಂದ 137) ಜಮೀನುಗಳನ್ನು ಅಡರಕಟ್ಟಿ ಗ್ರಾಮಕ್ಕೆ ಸೇರ್ಪಡೆಗೊಳಿಸುವ ಕುರಿತು ಸಲ್ಲಿಸಿದ ಪ್ರಸ್ತಾವನೆಗೆ ಸರಕಾರವು ತಮ್ಮ ಪತ್ರ ನಂ. ಗ್ರಾಅಪ. 112. ಜಿಪಿಎಸ್. 2025, ದಿನಾಂಕ: 21.01.2026 ರನ್ವಯ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ ರಾಜ್ ಅಧಿನಿಯಮ, 1993 ರ ಪ್ರಕರಣ 4(2) ರನ್ವಯ ಸೇರ್ಪಡೆ ಮಾಡಲು ಅನುಮೋದನೆ ನೀಡಿರುತ್ತಾರೆ.

ಅದರಂತೆ, ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಯಾತ ರಾಜ್ ಅಧಿನಿಯಮ, 1993 ರ ಪ್ರಕರಣ 4(2) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಗದಗ ಜಿಲ್ಲೆಯ ಜಿಲ್ಲಾಧಿಕಾರಿಯಾದ ಶ್ರೀಧರ ಸಿ.ಎನ್,

ಭಾ.ಆ.ಸೇ, ಎಂಬ ಹೆಸರಿನ ನಾನು, ಗದಗ ಜಿಲ್ಲೆಯ ಲಕ್ಷ್ಮೇಶ್ವರ ತಾಲೂಕಿನ ಈ ಕೆಳಕಂಡ ಕೋಷ್ಟಕದಲ್ಲಿ ನಮೂದಿಸಿದಂತೆ ಈ ಕೆಳಕಂಡ ಕೋಷ್ಟಕದ ಕಾಲಂ 6 ರಲ್ಲಿ ಸೂಚಿಸಲಾದ ಗ್ರಾಮ ಅಥವಾ ಗ್ರಾಮಗಳ ಗುಂಪನ್ನು ಅಥವಾ ಭಾಗಶಃ ಗ್ರಾಮ ಹಾಗೂ ಕ್ಷೇತ್ರಗಳನ್ನು ಗ್ರಾಮ ಪಂಚಾಯತಿಯ ಪ್ರದೇಶವೆಂದು ಮತ್ತು ಈ ಕೋಷ್ಟಕದ ಕಾಲಂ 5 ರಲ್ಲಿ ಸೂಚಿಸಲಾದ ಗ್ರಾಮಗಳನ್ನು ಸಂಬಂಧಿಸಿದ ಗ್ರಾಮ ಪಂಚಾಯತಿಯ ಕೇಂದ್ರ ಸ್ಥಾನವೆಂದು, ರಚಿಸಲು ಉದ್ದೇಶಿಸಿ ಕರಡು ಅಧಿಸೂಚನೆಯನ್ನು ಈ ಮೂಲಕ ಪ್ರಕಟಿಸಿದೆ. ನಕ್ಷೆಯನ್ನು ಅನುಬಂಧದಲ್ಲಿ ಲಗತ್ತಿಸಿದೆ. ಬಾಕಿ ಉಳಿದಂತೆ, **ಈ ಕೆಳಗಿನ ಕೋಷ್ಟಕದಲ್ಲಿ ದಾಖಲಾಗದ ಗ್ರಾಮ ಪಂಚಾಯತಿಗಳಲ್ಲಿ ಯಾವುದೇ ಬದಲಾವಣೆಗಳಿರುವುದಿಲ್ಲ**.

ಈ ಅಧಿಸೂಚನೆಯಿಂದ ಭಾದಿತರಾಗಬಹುದಾದ ಯಾವದೇ ವ್ಯಕ್ತಿಗಳು ಜಿಲ್ಲಾಧಿಕಾರಿಗಳು, ಗದಗ ಅವರಿಗೆ ತಮ್ಮ ಆಕ್ಷೇಪಣೆ ಮತ್ತು ಸಲಹೆಗಳನ್ನು ಈ ಅಧಿಸೂಚನೆ ಪ್ರಕಟಗೊಂಡ ದಿನಾಂಕದಿಂದ 10 (ಹತ್ತು) ದಿನಗಳ ಒಳಗಾಗಿ ಜಿಲ್ಲಾಧಿಕಾರಿಗಳು, ಗದಗ ಅವರಿಗೆ ಸಲ್ಲಿಸಬಹುದೆಂದು ಈ ಮೂಲಕ ಸಾರ್ವಜನಿಕ ತಿಳುವಳಿಕೆ ನೀಡಲಾಗಿದೆ. ಜಿಲ್ಲಾಧಿಕಾರಿಗಳಿಗೆ ಸಲ್ಲಿಸಲಾಗುವ ಎಲ್ಲಾ ಆಕ್ಷೇಪಣೆ ಮತ್ತು ಸಲಹೆಗಳನ್ನು ಪರಿಶೀಲಿಸಿ ಅಂತಿಮ ಅಧಿಸೂಚನೆಯನ್ನು ಹೊರಡಿಸಲಾಗುವುದೆಂದು ಈ ಮೂಲಕ ಪ್ರಕಟಿಸಲಾಗಿದೆ

**: : ಕೋಷ್ಟಕ : :**


| ಹಾಲಿ ಗ್ರಾಮ ಪಂಚಾಯತಿಗಳ ವಿವರ | | | | ನೂತನ / ಪರಿಷ್ಕೃತ ಗ್ರಾಮ ಪಂಚಾಯತಿಯ ವಿವರ | | |
|---|---|---|---|---|---|---|
| ಅ ನಂ | ಹಾಲಿ ಗ್ರಾಮ ಪಂಚಾಯತಿಯ ಕೇಂದ್ರ ಸ್ಥಾನ | ಗ್ರಾಮ ಪಂಚಾಯತಿಯೆಂದು ಘೋಷಿಸಿರುವ ಗ್ರಾಮ ಅಥವಾ ಗ್ರಾಮಗಳ ಸಮೂಹ | | ಅ ನಂ | ನೂತನ / ಪರಿಷ್ಕೃತ ಗ್ರಾಮ ಪಂಚಾಯತಿಯ ಕೇಂದ್ರ ಸ್ಥಾನ | ಗ್ರಾಮ ಪಂಚಾಯತಿಯೆಂದು ಘೋಷಿಸಿರುವ ಗ್ರಾಮ ಅಥವಾ ಗ್ರಾಮಗಳ ಸಮೂಹ ಅಥವಾ ಭಾಗಶಃ ಗ್ರಾಮ ಹಾಗೂ ಕ್ಷೇತ್ರಗಳ ವಿವರ |
| 1 | 2 | 3 | | 4 | 5 | 6 |
| **ತಾಲೂಕ : ಲಕ್ಷ್ಮೇಶ್ವರ** | | | | **ತಾಲೂಕ : ಲಕ್ಷ್ಮೇಶ್ವರ** | | |
| 1 | ಅಡರಕಟ್ಟಿ | 1) ಅಡರಕಟ್ಟಿ | | 1 | ಅಡರಕಟ್ಟಿ | 1) ಅಡರಕಟ್ಟಿ |
| | | 2) ಹರದಗಟ್ಟಿ | | | | 2) ಹರದಗಟ್ಟಿ |
| | | 3) ಕೊಂಡಿಕೊಪ್ಪ | | | | 3) ಕೊಂಡಿಕೊಪ್ಪ |
| | | | | | | 4) ದೇಸಾಯಿಬಣ (ಸರ್ವೆ ನಂ: 07 ರಿಂದ 78, 91, 103, 108 ರಿಂದ 171, 178 ರಿಂದ 368) |
| | | | | | | 5) ಪೇಠಬಣ (ಸರ್ವೆ ನಂ: 09, 15 ರಿಂದ 79, 81) |
| | | | | | | 6) ಬಸ್ತಿಬಣ (ಸರ್ವೆ ನಂ: ಸರ್ವೆ ನಂ : 02 ರಿಂದ 56) |
| | | | | | | 7) ಹಿರೇಬಣ (ಸರ್ವೆ ನಂ. 18 ರಿಂದ 35, 37 ರಿಂದ 326, 330 ರಿಂದ |

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment **WPP No. 297**


| ಹಾಲಿ ಗ್ರಾಮ ಪಂಚಾಯತಿಗಳ ವಿವರ | | | ನೂತನ / ಪರಿಷ್ಕೃತ ಗ್ರಾಮ ಪಂಚಾಯತಿಯ ವಿವರ | | |
|---|---|---|---|---|---|
| ಅ ನಂ | ಹಾಲಿ ಗ್ರಾಮ ಪಂಚಾಯತಿಯ ಕೇಂದ್ರ ಸ್ಥಾನ | ಗ್ರಾಮ ಪಂಚಾಯತಿಯೆಂದು ಘೋಷಿಸಿರುವ ಗ್ರಾಮ ಅಥವಾ ಗ್ರಾಮಗಳ ಸಮೂಹ | ಅ ನಂ | ನೂತನ / ಪರಿಷ್ಕೃತ ಗ್ರಾಮ ಪಂಚಾಯತಿಯ ಕೇಂದ್ರ ಸ್ಥಾನ | ಗ್ರಾಮ ಪಂಚಾಯತಿಯೆಂದು ಘೋಷಿಸಿರುವ ಗ್ರಾಮ ಅಥವಾ ಗ್ರಾಮಗಳ ಸಮೂಹ ಅಥವಾ ಭಾಗಶಃ ಗ್ರಾಮ ಹಾಗೂ ಕ್ಷೇತ್ರಗಳ ವಿವರ |
| 1 | 2 | 3 | 4 | 5 | 6 |
| | | | | | 347, 350 ರಿಂದ 404, 411) |
| | | | | | 8) ಹುಲಗೇರಿ ಬಣ (ಸರ್ವೆ ನಂ: 3 ರಿಂದ 7, 28 ರಿಂದ 137) |

\

(ಶ್ರೀಧರ ಸಿ.ಎನ್. ಭಾ.ಆ.ಸೇ)
**ಜಿಲ್ಲಾಧಿಕಾರಿ, ಗದಗ ಜಿಲ್ಲೆ, ಗದಗ.**




ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಸರ್ಕಾರಿ ವಿಭಾಗೀಯ ಮುದ್ರಣಾಲಯ, ಧಾರವಾಡ.

SOMASHEKA
RBE